ಕೂಡ ಈ ಬಗ್ಗೆ ಅವಳು ಕೆಲಸ ಮಾಡುವ ಪತ್ರಿಕೆಯಲ್ಲಿ ಸರಣಿ ಲೇಖನಗಳನ್ನು ಬರೆದಿದ್ದಳು.

ಎಂದೂ ಹಾಗೆಲ್ಲ ಕೈಬಿಟ್ಟು ಖರ್ಚು ಮಾಡದ ಬ್ರಿಯಾನಾ ಕ್ರಿಸ್‌ಮಸ್ ಹಬ್ಬದ ಸಮಯದಲ್ಲಿ ಮಾತ್ರ ಮಿತಿಮೀರಿ ಹಣ ಚೆಲ್ಲುವುದು ನೋಡಿದರೆ ಅಚ್ಚರಿಯಾಗುತ್ತಿತ್ತು. ಲಿವಿಂಗ್‌ರೂಮಿನ ಕಿಟಕಿಯ ಪಕ್ಕ ಎತ್ತರದ ಕ್ರಿಸ್‌ಮಸ್ ಮರವನ್ನಿಟ್ಟು ಇಡೀ ಮನೆಯನ್ನೂ, ಮರವನ್ನೂ, ಮನೆಯ ಹೊರಾಂಗಣವನ್ನೂ ವಿದ್ಯುತ್‌ಚಾಲಿತ ಮಿಣುಕುದೀಪಗಳಿಂದ ಅಲಂಕರಿಸುತ್ತಿದ್ದಳು. ಹಬ್ಬದ ಸಮಯಕ್ಕೆಂದೇ ಮೀಸಲಿಟ್ಟ ಕೆಂಪು–ಹಸಿರು ಮಿಶ್ರಿತ ಕ್ರಿಸ್‌ಮಸ್ ಬೆಡ್‌ಶೀಟುಗಳನ್ನೂ, ಸಾಂತಾಕ್ಲಾಸ್‌ನನ್ನು ಆಮಂತ್ರಿಸುವ ಗೋಡೆಯ ತೂಗು ಫಲಕಗಳನ್ನೂ, ಮರದ ಟೊಂಗೆಗಳಿಗೆ ಕಟ್ಟುವ ಪೆಂಡೆಂಟ್‌ಗಳನ್ನೂ ಸಂಗ್ರಹದಿಂದ ಹೊರತೆಗೆದು ಟೆಡಿ ಮತ್ತು ಟೇಮಿಯರಿಗೆ ಹತ್ತಾರು ಉಡುಗೊರೆಗಳನ್ನು ಕೊಂಡು ಮರದ ಕೆಳಗೆ ಜೋಡಿಸಿಡುತ್ತಿದ್ದಳು.

ಈ ಬಾರಿಯ ಹಬ್ಬದಲ್ಲಂತೂ ಬ್ರಿಯಾನಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಳು. ಪ್ಯಾಂಡಮಿಕ್ ಇರುವುದರಿಂದ ಸರ್ಕಾರದವರು ಎಲ್ಲರಿಗೂ ಇಂತಿಷ್ಟು ಎಂದು 'ಸ್ಟಿಮ್ಯುಲಸ್' ಹಣ ನೀಡಿದ್ದರು. ಯಾರಿಗೆ ಹಣ ಅತ್ಯವಶ್ಯಕವೋ ಅವರಿಗೆ ಮಾತ್ರ ನೀಡುವ ಬದಲು ನಮ್ಮಜ್ಜಿ ಹೇಳುತ್ತಿದ್ದ, "ಹಸಿದವರಿಗೂ ಮೂರು ದೋಸೆ, ಹೊಟ್ಟೆ ತುಂಬಿದವರಿಗೂ ಮೂರು ದೋಸೆ" ಎಂಬ ಗಾದೆಯಂತೆ ಪ್ರತಿಯೊಬ್ಬರಿಗೂ ಆಯಾ ವಿಂಗಡನೆಗೆ ಅನುಸಾರವಾಗಿ ಒಂದಿಷ್ಟು ಹೆಚ್ಚುವರಿ ಹಣ ಬಂದಿತ್ತು. ಬ್ರಿಯಾನಾ ಈ ಬಾರಿ ಆ ಹಣವನ್ನೂ ಉಡುಗೊರೆಗಳ ಮೇಲೆ ಖರ್ಚು ಮಾಡಿದ್ದಳು.

ಹಬ್ಬದ ಮಾರನೆಯ ದಿನ ಅವಳು ಕಳಿಸಿದ ವಿಡಿಯೊದಲ್ಲಿ ಮಗು ಟೇಮಿ ಮೂವತ್ತಕ್ಕೂ ಹೆಚ್ಚು ಗಿಫ್ಟ್ ಬಾಕ್ಸುಗಳ ಬಣ್ಣದ ಹೊದಿಕೆಗಳನ್ನು ಹರಿಹರಿದು ಒಳಗೇನಿದೆಯೆಂದು ಕೂಗುವಾಗ ಯಾವ ಆಟಿಕೆಯ ಮೇಲೂ ಅವಳ ಕಣ್ಣು ಕೆಲವು ಸೆಕೆಂಡುಗಳಿಗಿಂತ ಹೆಚ್ಚು ನಿಲ್ಲುತ್ತಿರಲಿಲ್ಲ. ಎಂಥ ಸಂದರ್ಭಕ್ಕೇ ಆಗಲಿ, ಮಕ್ಕಳಿಗೆ ಹೀಗೆ ಮಿತಿಮೀರಿ ಉಡುಗೊರೆಗಳನ್ನು ಕೊಳ್ಳುವುದು ಸರಿಯೇ ಎಂಬ ಬಗ್ಗೆ ನನಗೆ ಆಕ್ಷೇಪವಿತ್ತು.

"ಈ ಸಲ ಪ್ಯಾಂಡಮಿಕ್ ಬಂದು ಟೇಮಿಯನ್ನು ಎಲ್ಲೂ ಕರೆದುಕೊಂಡು ಹೋಗಲೇ ಆಗಲಿಲ್ಲ. ಮಗುವಿನ ಎರಡನೆಯ ಹುಟ್ಟುಹಬ್ಬಕ್ಕೆ ಕಾರಿನಲ್ಲೇ ಒಂದು ಕ್ರಾಸ್ ಕಂಟ್ರಿ ಟೂರ್ ಮಾಡೋಣ ಅಂದುಕೊಂಡಿದ್ದೆವು. ಹೀಗಾಗಿ ಪಶ್ಚಾತಾಪದಿಂದ ಪ್ರವಾಸಕ್ಕಾಗಿ ಎತ್ತಿಟ್ಟಿದ್ದ ಹಣವನ್ನೆಲ್ಲ ಉಡುಗೊರೆಗಳಿಗಾಗಿಯೇ ವ್ಯಯಿಸಿಬಿಟ್ಟೆವು. ಟೇಮಿಯ ಮುಖದ ಮೇಲಿನ ನಗುವಿಗೆ ಬೆಲೆ ಕಟ್ಟಲಾದೀತೇ" ಅಂದಾಗ ಮುಂದಿನ ವರ್ಷವೂ ಮಗು ಇಷ್ಟೇ ಬಗೆಯ ಗಿಫ್ಟುಗಳನ್ನು ನಿರೀಕ್ಷಿಸುವುದಿಲ್ಲವೇ ಅನ್ನಿಸಿತಾದರೂ ನಾನು ಬಾಯಿ ಬಿಟ್ಟು ಹೇಳಲಿಲ್ಲ. ಬ್ರಿಯಾನಾಳೇ ತುಸು ಹೊತ್ತು ತಡೆದು, "ಸ್ವಲ್ಪ ಹೆಚ್ಚಿಗೆಯೇ ಆಯಿತು ಅಲ್ಲವೇನು? ಪರವಾಗಿಲ್ಲ ಬಿಡು. ಪ್ರಪಂಚದ ಎರಡನೆಯ ಅತಿ ಶ್ರೀಮಂತ ವ್ಯಕ್ತಿ ಅಮೆಜಾನಿನ ಜೆಫ್ ಬೇಜೋಸ್‌ನಿಗೆ ಒಂದು ಹೊತ್ತು ಊಟ ಹಾಕಿದಂತಾಯಿತು ಅಂದುಕೊಳ್ಳುತ್ತೇನೆ" ಅಂತ ಸಂದರ್ಭ ತಿಳಿಗೊಳಿಸಿದಳು.

★★★

ಅಂದು ಸಂಜೆ ನಾಲ್ಕಕ್ಕೇ ಮನೆಯಲ್ಲಿರುತ್ತೇನೆ ಅಂದವಳು ಐದಾದರೂ ಬರದೇ ಇದ್ದುದರಿಂದ ಕರೆ ಮಾಡಿದೆ. "ಐದೇ ನಿಮಿಷ ಪ್ಯಾಕ್ ಮಾಡುತ್ತಿದ್ದೆ, ಸಮಯವಾದುದೇ ಗೊತ್ತಾಗಲಿಲ್ಲ ಸಾರಿ" ಎಂದು ಮುಂದಿನ ಹತ್ತೇ ನಿಮಿಷದಲ್ಲಿ ಟೇಮಿಯೊಡನೆ ಮನೆಯಲ್ಲಿದ್ದಳು. ಕೈಯಲ್ಲಿ ಒಂದು ಲಗೇಜು ಬ್ಯಾಗಿತ್ತು. "ಎಲ್ಲಿಗೆ ಹೊರಟಿದೆ ಸವಾರಿ? ಈ ಪ್ಯಾಂಡಮಿಕ್ ನಡುವೆಯೇ ಪ್ಲಾನ್ ಮಾಡಿದಿರೇನು? ರೋಡ್ ಟ್ರಿಪ್ ಹೋಗುತ್ತಿಲ್ಲ ತಾನೇ?" ಎಂದು ಆತಂಕದಿಂದಲೇ ಕೇಳಿದೆ.

"ಇನ್ನೆಲ್ಲಿಯ ರೋಡ್ ಟ್ರಿಪ್ಪು. ಮನೆ ಖಾಲಿ ಮಾಡುತ್ತಿದ್ದೇವೆ." ತನ್ನ ದನಿಯ ಕಠಿಣತೆಗೆ ತಾನೇ